**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಉಪಸ್ಥಿತರುಃ- ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 325/2021**

**ಫಿರ್ಯಾಧಿದಾರಃ  ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ (ಗ್ರಾ) ಪೊಲೀಸ್ ಠಾಣೆ**

**// ವಿರುದ್ಧ //**

**ಆರೋಪಿತರು ಃ  ರಾಜು ಮುತ್ಯಾ ಮತ್ತು ಇತರರು.**

**ದೋಷಾರೋಪಣೆ**

**ಆರೋಪಿತರುಃ**

1. ರಾಜು ಮುತ್ಯಾ ತಂದೆ ಸೋಮರಾಯ ಸರ್ವೆರರ್,
   ವಃ 43 ವರ್ಷ, (ಮೃತಪಟ್ಟಿರುತ್ತಾನೆ)
2. ಜಯಪ್ಪ @ ಜೈಶಿವ ತಂದೆ ಸಿದ್ದಪ್ಪ ಬೋಳಿ,
   ವಃ 28 ವರ್ಷ, (ಮೃತಪಟ್ಟಿರುತ್ತಾನೆ)
3. ಮುಕ್ಕಣ್ಣ ತಂದೆ ಮಲ್ಲಣ್ಣ ವಿಶ್ವಕರ್ಮ,
   ವಃ 45 ವರ್ಷ,
4. ತಾಯಪ್ಪ ಪಾಶಾ ನಾಗಪ್ಪ ಬೊಮ್ಮಣ,
   ವಃ 38 ವರ್ಷ,
5. ಶೇಖಪ್ಪ ತಂದೆ ಭೀಮಣ್ಣ ಮಡಿವಾಳ,
   ವಃ 35 ವರ್ಷ,
6. ಬಸಪ್ಪ ತಂದೆ ತಾಯಪ್ಪ ಬೊಮ್ಮಣ್ಣ,
   ವಃ 35 ವರ್ಷ,
7. ನರಸಪ್ಪ ತಂದೆ ಸಿದ್ದಪ್ಪ ಬೋಳಿ,

ವಃ 29 ವರ್ಷ, (ಮೃತಪಟ್ಟಿರುತ್ತಾನೆ)

8. ಶರಣಪ್ಪ ತಂದೆ ಮಲ್ಲಪ್ಪ ಸೀಕ್ರಿ,
ವಃ 52 ವರ್ಷ,

9. ಹರೀಶ ತಂದೆ ತಾಯಪ್ಪ ಕಲಾಲ,
ವಃ 28 ವರ್ಷ,

10. ಮೈಲಾರಿ ತಂದೆ ಮಲ್ಲಪ್ಪ ನೀಲಹಳ್ಳಿ,
ವಃ 40 ವರ್ಷ,

11. ಮಾರ್ತಂಡ ತಂದೆ ಸಾಬಣ್ಣ ಬಂಬಾಯಿ,
ವಃ 37 ವರ್ಷ,

12. ತಾಯಪ್ಪ ತಂದೆ ಹಣಮಯ್ಯ ಕಲಾಲ,
ವಃ 37 ವರ್ಷ, (ಮೃತಪಟ್ಟಿರುತ್ತಾನೆ)

13. ಶರಣಪ್ಪ ತಂದೆ ಸಿದ್ದಪ್ಪ ಬೋಳಿ,
ವಃ 42 ವರ್ಷ,

14. ಮಶಪ್ಪ ತಂದೆ ತಾಯಪ್ಪ ಕಾಸೋರ,
ವಃ 44 ವರ್ಷ,

15. ನರಸಪ್ಪ ತಂದೆ ಮಹಾದೇವಪ್ಪ ಮುಕಡೇರ,
ವಃ 35 ವರ್ಷ,

16. ತಾಯಪ್ಪ ತಂದೆ ಮಲ್ಲಪ್ಪ ಬೊಮ್ಮಣ್ಣೋರ ,
ವಃ 22 ವರ್ಷ,

17. ಚಿದಾನಂದ ತಂದೆ ಶರಣಪ್ಪ ಪಡಶೇಟ್ಟಿ,
ವಃ 23 ವರ್ಷ, (ಮೃತಪಟ್ಟಿರುತ್ತಾನೆ)

18. ಶಿವಕುಮಾರ ತಂದೆ ಬಸವರಾಜ ಕುರನಳ್ಳಿ,
ವಃ 38 ವರ್ಷ,

19. ಮಲ್ಲಪ್ಪ ತಂದೆ ಹೊನ್ನಪ್ಪ ಉಳ್ಳಗಡ್ಡಿ,
ವಃ 32 ವರ್ಷ,

20. ತಾಯಪ್ಪ ತಂದೆ ಮಲ್ಲಪ್ಪ ಪೀರಪ್ಪಗುಡಿಕಾಡೋರ,
ವಃ 29 ವರ್ಷ,

ಎಲ್ಲರೂ ಸಾಃ ಬಳಿಚಕ್ರ ಗ್ರಾಮ,
ತಾಃ ಮತ್ತು ಜಿಃ ಯಾದಗಿರಿ.

**ಆರೋಪಿತರಾದ ನಿಮ್ಮ ವಿರುದ್ಧ ದೋಷಿಸುವ ದೋಷಾರೋಪಣೆ ಏನೆಂದರೆ**

ದಿನಾಂಕ 17.04.2021 ರಂದು ಸಾಃ 05-30 ಗಂಟೆ ಸುಮಾರಿಗೆ ಬಳಿಚಕ್ರ ಗ್ರಾಮದಲ್ಲಿ ಭಕ್ತಿ ಲಿಂಗೇಶ್ವರ ಮುಕ್ತಿ ಮಠ ರಾಜು ಮುತ್ಯ ಮಠದ ಹತ್ತಿರ ಆರೋಪಿತರಾದ ನೀವು ಕೂಡಿಕೊಂಡು ಮಠ್ದ ಹತ್ತಿರ ಗುಂಪಾಗಿ ಸೇರಿಕೊಂಡು ಕೋವಿಡ್-19, 2 ನೇ ಅಲೆ ಇದ್ದರೂ ಕೂಡ ಕೋವಿಡ್ ನಿಯ ಪಾಲಿಸದೆ ಜಾತೆ ಮಾಡಲು ಮತ್ತು ತೇರು ಎಳೆಯಲು ಜನರು ಯಾರಗೂ ಹೇಳದೆ ಕೇಳದೆ ಮತ್ತು ತೇರು ಎಳೆಯುವ ಮುಂಚೆ ಸುರಕ್ಷತೆಯ ಬಗ್ಗೆ ಯಾವ ಅಧೀಕೃತ ಅಧಿಕಾರಿಗಳಿಂದ ಆರೋಪಿತರಾದ ನೀವು ತೇರನ್ನು ತಪಾಷಣೆ ಮಾಡಿಸದೆ ಕೋವಿಡ್-19 ರೋಗ ಹರಡುವ ಸಂಭವ ಇದ್ದರು ಕೂಡ ನಿರ್ಲಕ್ಷವಹಿಸಿ ಸರಕಾರದ ಆದೇಶವನ್ನು ಉಲ್ಲಂಘನೆ ಮಾಡಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.269, 270 ಮತ್ತು ಐ.ಪಿ.ಸಿ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

2. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಜನರ ಪ್ರಾಣಕ್ಕೆ ಸುರಕ್ಷತೆಯ ನಿರ್ಲಕ್ಷಿಸಿ ತೋರು ಜೋರಾಗಿ ಎಳೆಯುತ್ತಿರುವಾಗ ತೇರು ಅರ್ಧಕ್ಕೆ ಕಟ್ಟಾಗಿ ಬಿದ್ದರಿಂದ 2 ನೇ ಆರೋಪಿತನಿಗೆ ಕಾಲಿಗೆ ಭಾರಿ ರಕ್ತಗಾಯವಾಗಿದ್ದು, 4 ನೇ ಆರೋಪಿತನಿಗೆ ಸೊಂಟಕ್ಕೆ ಗುಪ್ತ ಪೆಟ್ಟು ಆಗಿದ್ದು, ತೇರು ಮುರಿದು ಬಿದ್ದ ಆದ ಗಾಯಗಳ ಬಾದೆಯಿಂದ 2 ನೇ ಆರೋಪಿತನು ದಿನಾಂಕ 10.052021 ರಂದು ಮೃತಪಟ್ಟಿರುತ್ತನೆ, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304(ಎ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

3. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಕೋವಿಡ್-19 ಸ್ಫೋಟ ಮತ್ತು ಸೋಂಕು ಹರಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಯಾದಗಿರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಜನರು ಜಾತ್ರೆ ಸಭೆ ಸಮಾರಂಭ ಯಾವುದೇ ಕಾರ್ಯಕ್ರಮ ಮಾಡುವುದನ್ನು ನಿಷೇಧಿಸಿ, ಆ ಆದೇಶವನ್ನು ಉಲ್ಲಂಘನೆ ಮಾಡಿದ್ದು,ಈ ಮೂಲಕ  ಭಾರತೀಯ ದಂಡ ಸಂಹಿತೆ ಕಲಂ 5(1) ಕರ್ನಾಟಕ ಸಾಂಕ್ರಾಮಿಕ ರೋಗ ತಡೆ ಕಾಯ್ದಿ 2020 ರ ಅಡಿಯಲ್ಲಿ  ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

**ದಿನಾಂಕಃ 03.10.2025.**
**ಸ್ಥಳಃ  ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ಯಾದಗಿರಿ.**